**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ**

**ಸಿ.ಸಿ ನಂ. 178/2021**

ದಿನಾಂಕಃ**.22.12.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಚಾಸಾ**-11** ಪ್ರಾಸಾ**-4**

| | | |
|---|---|---|
| ಹೆಸರು | - | ವಿನಯ್ |
| ತಂದೆ / ಗಂಡನ ಹೆಸರು | - | ಓದು ಸಿದ್ದೇಗೌಡ |
| ವಯಸ್ಸು | - | **38** |
| ಉದ್ಯೋಗ | - | ಪೊಲೀಸ್ ಮುಖ್ಯಪೇದೆ, ಸಾತನೂರು ಪೊ.ಠಾಣೆ |
| ವಿಳಾಸ | - | ಸಾತನೂರು |

**ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-**

ಸಾತನೂರು ಪೊ.ಠಾಣೆಯಲ್ಲಿ ಸುಮಾರು **6** ವರ್ಷದಿಂದ ಕೆಲಸ ಮಾಡುತ್ತಿದ್ದೇನೆ.

ದಿಃ **03.12.2020** ರಂದು ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಸಂಜೆ **4.45** ಗಂಟೆ ಸುಮಾರಿಗೆ ಚಾಸಾ**-1** ರವರು ದೂರು , ಒಂದು ಮಹಜರ್ , **112** ಪೌಚುಗಳನ್ನು ಕೊಟ್ಟಿದ್ದು ನಾನು ಅದನ್ನು ಸ್ವೀಕರಿಸಿಕೊಂಡು ಠಾ.ಅ.ಸ. **173/2020** ಎಂದು ದಾಖಲಿಸಿಕೊಂಡು ಪ್ರ.ವ.ವ ವನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆ.

ಸಾಕ್ಷಿ ಒಂದು ದೂರನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಎಂದು ಗುರುತಿಸಿದ್ದು, ಸದರಿ **ದೂರನ್ನು** ನಿಪಿ**-5** ಎಂದು, ಸಾಕ್ಷಿ ಸಹಿಯನ್ನು ನಿಪಿ**-5(ಎ)** ಎಂದು ಗುರುತಿಸಲಾಯಿತು.

ಸಾಕ್ಷಿ ಮಹಜರ್ ನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಎಂದು ಗುರುತಿಸಿದ್ದು, ಸದರಿ **ಮಹಜರ್ ನ್ನು** ಈಗಾಗಲೇ ನಿಪಿ**-1** ಎಂದು, ಸಾಕ್ಷಿ ಸಹಿಯನ್ನು ನಿಪಿ**-1(ಡಿ)** ಎಂದು ಗುರುತಿಸಲಾಯಿತು.

**112** ಪೌಚ್ ಗಳನ್ನು ದತ್ತು ಪಡಿಸಿಕೊಂಡು ಅದರಲ್ಲಿ ರಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು ಮಾಲು ಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ವರದಿ ಸಲ್ಲಿಸಿರುತ್ತೇನೆ. ನಂತರ **04.12.2020** ರಂದು ಘಟನೆ ಯಲ್ಲಿ ಪಂಚರಾಗಿ ಮತ್ತು ದಾಳಿಯಲ್ಲಿ ಭಾಗವಹಿಸಿದ ಸಿಬ್ಬಂದಿಯಾದ ಚಾಸಾ**-2** ರಿಂದ **8** ರವರ ಹೇಳಿಕೆಗಳನ್ನು ಪಡೆದುಕೊಂಡೆ. ದಿಃ **10.12.2020** ರಂದು ಜಪ್ತು ಪಡಿಸಿಕೊಂಡ ಮಾದರಿಯನ್ನು ಎಫ್ ಎಸ್ ಎಲ್ ವರದಿಗೆ ಕಳುಹಿಸಿಕೊಟ್ಟೆ . ನಂತರ ದಿಃ **16.01.2021** ರಂದು ಎಫ್ ಎಸ್ ಎಲ್ ವರದಿ ಬಂದಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡೆ .

ಸಾಕ್ಷಿ ಎಫ್ ಎಸ್ ಎಲ್ ವರಿದಿಯನ್ನು ಮತ್ತು ಒಂದು ಮಾದರಿ ಸೀಲ್ ನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ವರದಿ ಮತ್ತು ಮಾದರಿ ಸೀಲ್ ಎಂದು ಗುರುತಿಸಿದ್ದು ಅವುಗಳನ್ನು ಕ್ರಮಾವಾಗಿ ನಿಪಿ-**6** ಮತ್ತು **7** ಎಂದು, ಸಾಕ್ಷಿ ಸಹಿಯನ್ನು ನಿಪಿ-**6**(ಎ) ಮತ್ತು **7** (ಎ) ಎಂದು ಗುರುತಿಸಲಾಯಿತು. ಸದರಿ ಎಫ್ ಎಸ್ ಎಲ್ ವರಿದಿಯಲ್ಲಿ ಮದ್ಯ ಇದೆ ಎಂದು ವರದಿ ನೀಡಿದ್ದರು. ನಂತರ ದಿಃ **19.12.2020** ರಂದು ಅರೆ ಕಟ್ಟೆ ದೊಡ್ಡಿ ಗ್ರಾಮದ ಪಿಡಿಓ ರವರಿಗೆ ಪತ್ರ ಬರೆದು ಆರೋಪಿ ಮನೆಯ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್ ಕೇಳಿದ್ದೆ. ಸಾಕ್ಷಿ ಒಂದು ಪತ್ರವನ್ನು ನೋಡಿ ಅದರಲ್ಲಿರುವ ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ಪತ್ರ ಎಂದು ಗುರುತಿಸಿದ್ದು ಸದರಿ ಪತ್ರವನ್ನು ನಿಪಿ- **8 ,** ಸಾಕ್ಷಿ ಸಹಿಯನ್ನು ನಿಪಿ-**8**(ಎ) ಎಂದು ಗುರುತಿಸಲಾಯಿತು.

ನಂತರ ದಿಃ **20.01.2021** ರಂದು ಸದರಿ ಪಿಡಿಓ ಆರೋಪಿ ಮನೆಯ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್ ನ್ನು ನೀಡಿದ್ದು ಅದನ್ನು ಪಡೆದುಕೊಂಡೆ. ಸಾಕ್ಷಿ ಒಂದು ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್ ನ್ನು ನೋಡಿ ಅದರಲ್ಲಿರುವ ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್ ಎಂದು ಗುರುತಿಸಿದ್ದು ಸದರಿ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್‌ನ್ನು ನಿಪಿ- **9 ,** ಸಾಕ್ಷಿ ಸಹಿಯನ್ನು ನಿಪಿ-**9**(ಎ) ಎಂದು ಗುರುತಿಸಲಾಯಿತು.

ನಂತರ ದಿಃ **18.01.2021** ರಂದು ಆರೋಪಿ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದಿದ್ದು ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದೆ. ನಂತರ ತನಿಖೆಯನ್ನು ಮುಕ್ತಾಯಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದೆ.

ಜಪ್ತು ಪಡಿಸಿಕೊಂಡ ಮುದ್ದೆ ಮಾಲನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಒಂದು ಪೌಚ್ ನ್ನು ನೋಡಿ ಸದರಿ ಮುದ್ದೆ ಮಾಲು ಎಂದು ಗುರುತಿಸಿದ್ದು ಅದನ್ನು ಎಂ.ಒ-**1** ಎಂದು ಗುರುತಿಸಲಾಯಿತು.

ಆ.ಯನ್ನು ನೋಡಿದರೆ ಗುರುತಿಸಬಲ್ಲೆ. ಅವನು ಇಂದು ನ್ಯಾಯಾಲಯದಲ್ಲಿ ಹಾಜರಿದ್ದಾರೆ.

ಸಾಕ್ಷಿ ಒಂದು ಪ್ರವಪ ವನ್ನು ನೋಡಿ ಅದರಲ್ಲಿರುವ ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ಪ್ರವಪ ಎಂದು ಗುರುತಿಸಿದ್ದು ಸದರಿ ಪ್ರವಪ ವನ್ನು ನಿಪಿ- **10 ,** ಸಾಕ್ಷಿ ಸಹಿಯನ್ನು ನಿಪಿ-**10**(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ. ವಕೀಲರಿಂದಃ**

ನನಗೆ ಘಟನೆ ಬಗ್ಗೆ ಮಾಹಿತಿ ಬಂದಿರುವುದಿಲ್ಲ. ಆರೋಪಿ ಮನೆಯನ್ನು ನಾನು ನೋಡಿರುವುದಿಲ್ಲ. ಆರೋಪಿ ಮನೆ ಬಗ್ಗೆ ನಿಪಿ-9 ನ್ನು ಕೊಟ್ಟಿದ್ದೇನೆ. ನಿಪಿ-9 ಆರೋಪಿ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿ. ಆರೋಪಿ ಎಲ್ಲಿಂದ ಮದ್ಯವನ್ನು ಖರೀದಿ ಮಾಡಿಕೊಂಡು ಬಂದಿದ್ದ ಎಂದು ತನಿಖೆ ಮಾಡಿಲ್ಲ ಎಂದರೆ ಸರಿ. ಆರೋಪಿ ಯಾವುದೇ ಮದ್ಯವನ್ನು ಹೊಂದಿರುವುದಿಲ್ಲ ಮತ್ತು ಆರೋಪಿ ಗೂ ಹಾಗೂ ಎಂ.ಒ -1 ಕ್ಕೂ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

ದೂರು ನನ್ನ ಮೇಲಾಧಿಕಾರಿ ಕೊಟ್ಟಿದ್ದರಿಂದ ಸುಳ್ಳು ದೂರು ಇದ್ದರು ಅದನ್ನು ದಾಖಲಿಸಿಕೊಂಡು ಠಾಣಾ ಅಂಕಿ ಸಂಖ್ಯೆ ಸಲುವಾಗಿ ಆರೋಪಿ

ಯಾವುದೇ ತಪ್ಪು ಮಾಡದೇ ಇರುವುದು ಕಂಡು ಬಂದರು ಮತ್ತು ನಾನು ಯಾವುದೇ ಹೇಳಿಕೆಗಳನ್ನು ದಾಖಲಿಸಿಕೊಳ್ಳದಿದ್ದರೂ ಮತ್ತು ಮಾದರಿಯನ್ನು ಎಪ್.ಎಸ್.ಎಲ್ ಗೆ ಕಳುಹಿಸಿದೆ ಇದ್ದರು ಆರೋಪಿ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**